13 DEC 2012

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಭೈರವೇಶ್ವರ ಪ್ಯಾರಾ ಮೆಡಿಕಲ್ ಕಾಲೇಜ್, ಶ್ರೀ ಭೈರವೇಶ್ವರ ಡಿ.ಎಡ್. ಕಾಲೇಜ್ ಕಾಂಪ್ಲೆಕ್ಸ್, ಭೈರಪಲ್ಲಿ, ಶ್ರೀನಿವಾಸಪುರ, ಕೋಲಾರ ಜಿಲ್ಲೆ ಈ ಸಂಸ್ಥೆಗೆ ಪ್ಯಾರಾ ಮೆಡಿಕಲ್ ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲು ಮಂಜೂರಾತಿ ನೀಡುವ ಬಗ್ಗೆ.

******

**ಓದಲಾಗಿದೆ:**

ಸದಸ್ಯ ಕಾರ್ಯದರ್ಶಿ, ಪ್ಯಾರಾ ಮೆಡಿಕಲ್ ಬೋರ್ಡ್, ಬೆಂಗಳೂರು ಇವರ ಪತ್ರ ಸಂಖ್ಯೆ:ಪಿಎಂಬಿ/168/2012-13, ದಿನಾಂಕ 24.09.2012.

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ಸದಸ್ಯ ಕಾರ್ಯದರ್ಶಿ, ಪ್ಯಾರಾ ಮೆಡಿಕಲ್ ಬೋರ್ಡ್, ಬೆಂಗಳೂರು ಇವರು ಶ್ರೀ ಭೈರವೇಶ್ವರ ಪ್ಯಾರಾ ಮೆಡಿಕಲ್ ಕಾಲೇಜ್, ಶ್ರೀ ಭೈರವೇಶ್ವರ ಡಿ.ಎಡ್. ಕಾಲೇಜ್ ಕಾಂಪ್ಲೆಕ್ಸ್, ಭೈರಪಲ್ಲಿ, ಶ್ರೀನಿವಾಸಪುರ, ಕೋಲಾರ ಜಿಲ್ಲೆ ಈ ಸಂಸ್ಥೆಯು ಡಿಪ್ಲೊಮೋ ಇನ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ, ಡಿಪ್ಲೊಮಾ ಇನ್ ಹೆಲ್ತ್ ಇನ್ಸ್‌ಪೆಕ್ಟರ್ ಮತ್ತು ಡಿಪ್ಲೊಮಾ ಇನ್ ಅಪರೇಷನ್ ಥಿಯೇಟರ್ ಟೆಕ್ನಾಲಜಿ ಕೋರ್ಸುಗಳನ್ನು ತಲಾ 20 (ಇಪ್ಪತ್ತು) ಸೀಟುಗಳ ವಾರ್ಷಿಕ ಪ್ರವೇಶಮಿತಿಯೊಂದಿಗೆ ಹೊಸದಾಗಿ ಪ್ರಾರಂಭಿಸಲು ಮಂಜೂರಾತಿಗಾಗಿ ಪ್ಯಾರಾ ಮೆಡಿಕಲ್ ಬೋರ್ಡ್‌ಗೆ ಅರ್ಜಿಯನ್ನು ಸಲ್ಲಿಸಿದ್ದು, ಪ್ಯಾರಾ ಮೆಡಿಕಲ್ ಬೋರ್ಡ್ ಈ ಸಂಸ್ಥೆಯಲ್ಲಿ ಮೇಲ್ಕಂಡ ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲು ಅಗತ್ಯವಿರುವ ಮೂಲಭೂತ ಸೌಕರ್ಯಗಳ ಬಗ್ಗೆ ಸ್ಥಳ ತಪಾಸಣೆ ನಡೆಸಿ, ವರದಿ ಸಲ್ಲಿಸಲು ತಪಾಸಣಾ ತಂಡವನ್ನು ರಚಿಸಲಾಗಿತ್ತೆಂದು, ಅದರಂತೆ, ತಪಾಸಣಾ ತಂಡವು ಸಂಸ್ಥೆಗೆ ಭೇಟಿ ನೀಡಿ, ಸ್ಥಳ ತಪಾಸಣೆ ನಡೆಸಿ, ಈ ಸಂಸ್ಥೆಯಲ್ಲಿ ಮೇಲ್ಕಂಡ ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲು ಮಂಜೂರಾತಿ ನೀಡಲು ಶಿಫಾರಸ್ಸು ಮಾಡಿರುತ್ತದೆಂದು ತಿಳಿಸುತ್ತಾ, ಸದರಿ ಸಂಸ್ಥೆಗೆ 2012-13 ನೇ ಸಾಲಿನಿಂದ ಡಿಪ್ಲೊಮೋ ಇನ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ, ಡಿಪ್ಲೊಮಾ ಇನ್ ಹೆಲ್ತ್ ಇನ್ಸ್‌ಪೆಕ್ಟರ್ ಮತ್ತು ಡಿಪ್ಲೊಮಾ ಇನ್ ಅಪರೇಷನ್ ಥಿಯೇಟರ್ ಟೆಕ್ನಾಲಜಿ ಕೋರ್ಸುಗಳನ್ನು ತಲಾ 20 (ಇಪ್ಪತ್ತು) ಸೀಟುಗಳ ವಾರ್ಷಿಕ ಪ್ರವೇಶಮಿತಿಯೊಂದಿಗೆ ಹೊಸದಾಗಿ ಪ್ರಾರಂಭಿಸಲು ಮಂಜೂರಾತಿ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ. ಮುಂದುವರೆದು, ತಪಾಸಣಾ ತಂಡವು ಸಲ್ಲಿಸಿರುವ ವರದಿಯನ್ನು ಹಾಗೂ ಈ ಬಗ್ಗೆ ಪ್ಯಾರಾ ಮೆಡಿಕಲ್ ಬೋರ್ಡ್‌ನಲ್ಲಿ ಜರುಗಿದ ಸಭೆಯ ನಡವಳಿಯ ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, ಶ್ರೀ ಭೈರವೇಶ್ವರ ಪ್ಯಾರಾ ಮೆಡಿಕಲ್ ಕಾಲೇಜ್, ಶ್ರೀ ಭೈರವೇಶ್ವರ ಡಿ.ಎಡ್. ಕಾಲೇಜ್ ಕಾಂಪ್ಲೆಕ್ಸ್, ಭೈರಪಲ್ಲಿ, ಶ್ರೀನಿವಾಸಪುರ, ಕೋಲಾರ ಜಿಲ್ಲೆ ಈ ಸಂಸ್ಥೆಯು 2013-14 ನೇ ಸಾಲಿನಿಂದ ಡಿಪ್ಲೊಮೋ ಇನ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ, ಡಿಪ್ಲೊಮಾ ಇನ್ ಹೆಲ್ತ್ ಇನ್ಸ್‌ಪೆಕ್ಟರ್ ಮತ್ತು ಡಿಪ್ಲೊಮಾ ಇನ್ ಅಪರೇಷನ್ ಥಿಯೇಟರ್ ಟೆಕ್ನಾಲಜಿ ಕೋರ್ಸುಗಳನ್ನು ತಲಾ 20 (ಇಪ್ಪತ್ತು) ಸೀಟುಗಳ ವಾರ್ಷಿಕ ಪ್ರವೇಶಮಿತಿಯೊಂದಿಗೆ ಹೊಸದಾಗಿ ಪ್ರಾರಂಭಿಸಲು ಮಂಜೂರಾತಿ ನೀಡಲು ಸರ್ಕಾರವು ತೀರ್ಮಾನಿಸಿ, ಈ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 280 ಎಂಎಂಸಿ 2012, ಬೆಂಗಳೂರು, ದಿನಾಂಕ 15-12-2012**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಭೈರವೇಶ್ವರ ಪ್ಯಾರಾ ಮೆಡಿಕಲ್ ಕಾಲೇಜ್, ಶ್ರೀ ಭೈರವೇಶ್ವರ ಡಿ.ಎಡ್. ಕಾಲೇಜ್ ಕಾಂಪ್ಲೆಕ್ಸ್, ಭೈರಪಲ್ಲಿ, ಶ್ರೀನಿವಾಸಪುರ, ಕೋಲಾರ ಜಿಲ್ಲೆ ಈ ಸಂಸ್ಥೆಯು 2013-14 ನೇ ಸಾಲಿನಿಂದ 1) ಡಿಪ್ಲೊಮೋ ಇನ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ, 2) ಡಿಪ್ಲೊಮಾ ಇನ್ ಹೆಲ್ತ್ ಇನ್ಸ್‌ಪೆಕ್ಟರ್ ಮತ್ತು 3) ಡಿಪ್ಲೊಮಾ ಇನ್ ಅಪರೇಷನ್ ಥಿಯೇಟರ್ ಟೆಕ್ನಾಲಜಿ ಕೋರ್ಸುಗಳನ್ನು ತಲಾ 20 (ಇಪ್ಪತ್ತು) ಸೀಟುಗಳ ವಾರ್ಷಿಕ ಪ್ರವೇಶಮಿತಿಯೊಂದಿಗೆ ಹೊಸದಾಗಿ ಪ್ರಾರಂಭಿಸಲು ಕೆಳಕಂಡ ಷರತ್ತುಗಳಿಗೊಳಪಟ್ಟು, ಮಂಜೂರಾತಿ ನೀಡಿ ಆದೇಶಿಸಿದೆ.

..2

PRINCIPAL
Mahatma Gandhi Institute of Paramedical Science
P.J. Extension, DAVANGERE-577002.

Scanned by CamScanner

## ಷರತ್ತುಗಳು

(1) ಯಾವುದೇ ಪ್ಯಾರಾ ಮೆಡಿಕಲ್ ಕೋರ್ಸುಗಳನ್ನು ಪ್ರಾರಂಭ ಮಾಡುವ ಮೊದಲು ಸಂಸ್ಥೆಯು ಸಂಯೋಜನಾ ಶುಲ್ಕದ ರೂಪದಲ್ಲಿ ಪ್ರತಿ ಕೋರ್ಸಿಗೆ ರೂ.30,000/- (ಮೂವತ್ತು ಸಾವಿರ ರೂಪಾಯಿಗಳು ಮಾತ್ರ) ಗಳು ಹಾಗೂ ಪ್ರತಿ ವರ್ಷ ಸಂಯೋಜನಾ ನವೀಕರಣ ಶುಲ್ಕವಾಗಿ ರೂ.10,000/- (ಹತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಅಥವಾ ಈ ಬಗ್ಗೆ ಸರ್ಕಾರವು ಕಾಲಕಾಲಕ್ಕೆ ಪರಿಷ್ಕರಿಸಿ ನಿಗದಿಪಡಿಸಿದ ದರಗಳಂತೆ ಶುಲ್ಕವನ್ನು ಪ್ಯಾರಾ ಮೆಡಿಕಲ್ ಬೋರ್ಡಿಗೆ ಸಂದಾಯ ಮಾಡತಕ್ಕದ್ದು.

(2) ಈ ಸಂಸ್ಥೆಯವರು ಸದರಿ ಕೋರ್ಸುಗಳನ್ನು ಪ್ರಾರಂಭಿಸುವ ಮೊದಲು ಪ್ಯಾರಾ ಮೆಡಿಕಲ್ ಬೋರ್ಡ್ ನಿಗದಿಪಡಿಸುವ ಬ್ಯಾಂಕ್ ಗ್ಯಾರಂಟಿಯನ್ನು ಒದಗಿಸತಕ್ಕದ್ದು.

(3) ಸದರಿ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ವರ್ಷಕ್ಕೆ ಒಂದು ಬಾರಿ ನವೆಂಬರ್ ತಿಂಗಳೊಳಗಾಗಿ ನೀಡಿ, ಜನವರಿ ಅಥವಾ ಫೆಬ್ರವರಿ ತಿಂಗಳ ಮಧ್ಯಂತರದೊಳಗೆ ಪ್ರವೇಶಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು, ಮೂಲ ಅಂಕಪಟ್ಟಿಗಳನ್ನು ಮತ್ತು ದೃಢೀಕರಣಗಳನ್ನು ಈ ಸಂಸ್ಥೆಯವರು ಪ್ಯಾರಾ ಮೆಡಿಕಲ್ ಬೋರ್ಡಿಗೆ ಸಲ್ಲಿಸತಕ್ಕದ್ದು.

(4) ಸದರಿ ಕೋರ್ಸುಗಳಿಗೆ ಪ್ರವೇಶ ಪಡೆದ ಪ್ರತಿ ವಿದ್ಯಾರ್ಥಿಗೆ ರೂ.500.00 ರಂತೆ ನೋಂದಣಿ ಶುಲ್ಕ ಹಾಗೂ ಅವರ ವಿದ್ಯಾರ್ಹತೆಯ ಪ್ರಮಾಣ ಪತ್ರದೊಂದಿಗೆ ವಿದ್ಯಾರ್ಥಿಗಳ ಆಯ್ಕೆ ಪಟ್ಟಿಯನ್ನು ಮಂಜೂರಾತಿಗಾಗಿ ಪ್ಯಾರಾ ಮೆಡಿಕಲ್ ಬೋರ್ಡಿಗೆ ಸಲ್ಲಿಸತಕ್ಕದ್ದು.

(5) ಪ್ಯಾರಾ ಮೆಡಿಕಲ್ ಕೋರ್ಸಿಗೆ ಪ್ರವೇಶ ಪಡೆಯಲು ಕನಿಷ್ಠ ವಿದ್ಯಾರ್ಹತೆಯಾದ ಪಿ.ಯು.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು.

(6) ಪ್ಯಾರಾ ಮೆಡಿಕಲ್ ಕೋರ್ಸಿಗೆ ಪ್ರವೇಶ ಪಡೆದ ಪ್ರತಿ ವಿದ್ಯಾರ್ಥಿಯಿಂದ ಸರ್ಕಾರ ನಿಗದಿಪಡಿಸಿದ ಶುಲ್ಕವನ್ನು ಮಾತ್ರ ಪಡೆಯತಕ್ಕದ್ದು.

(7) ಸರ್ಕಾರ ಮಂಜೂರಾತಿ ನೀಡಿದ ಪ್ರವೇಶ ಮಿತಿಗಿಂತ ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರವೇಶ ನೀಡತಕ್ಕದ್ದಲ್ಲ. ಒಂದು ವೇಳೆ ನಿಗದಿಪಡಿಸಿದ ಪ್ರವೇಶಮಿತಿಗಿಂತ ಹೆಚ್ಚಿನ ಪ್ರವೇಶ ಮಾಡಿಕೊಂಡಲ್ಲಿ, ಅದರಿಂದ ಉಂಟಾಗುವ ಅನಾನುಕೂಲ / ಸಮಸ್ಯೆಗಳಿಗೆ ಸಂಸ್ಥೆಯೇ ಜವಾಬ್ದಾರಿಯಾಗಿರುತ್ತದೆ.

(8) ಸದರಿ ಸಂಸ್ಥೆಗೆ ಸರ್ಕಾರದಿಂದ ಮಂಜೂರಾದ ಸೀಟುಗಳಲ್ಲಿ ಶೇ.20 ರಷ್ಟು ಸೀಟುಗಳನ್ನು ಸರ್ಕಾರದಿಂದ ಆಯ್ಕೆ ಮಾಡಿದ ಅಭ್ಯರ್ಥಿಗಳಿಗೆ ಪ್ರವೇಶ ನೀಡಲು ಸಂಸ್ಥೆಯು ಬದ್ಧವಾಗಿರತಕ್ಕದ್ದು.

(9) ಸದರಿ ಸಂಸ್ಥೆಯು ಪ್ಯಾರಾ ಮೆಡಿಕಲ್ ಬೋರ್ಡ್ ನಿಗದಿಪಡಿಸಿದ ನಿಯಮಾವಳಿಯಂತೆ, ಪ್ಯಾರಾ ಮೆಡಿಕಲ್ ಕೋರ್ಸುಗಳಿಗೆ ಪ್ರವೇಶ ಪಡೆಯುವ ಪ್ರತಿ ವಿದ್ಯಾರ್ಥಿಯ ವಯೋಮಿತಿ, ಪಠ್ಯಕ್ರಮ, ಕೋರ್ಸಿನ ಅವಧಿ ಹಾಗೂ ಪರೀಕ್ಷಾ ಕ್ರಮ ಮತ್ತು ಪ್ಯಾರಾ ಮೆಡಿಕಲ್ ಬೋರ್ಡ್ ನಿಗದಿಪಡಿಸಿದ ಇತರೆ ನಿಯಮಗಳನ್ನು ಚಾಚೂ ತಪ್ಪದೇ ಕಡ್ಡಾಯವಾಗಿ ಪಾಲಿಸತಕ್ಕದ್ದು.

(10) ಸಂಸ್ಥೆಯು ಸುಸಜ್ಜಿತ ತರಗತಿ ಕೊಠಡಿ, ಪ್ರಯೋಗಶಾಲೆ, ವಾಚನಾಲಯ, ವಿದ್ಯಾರ್ಥಿನಿಲಯ ಹಾಗೂ ಇತರೆ ಸೌಲಭ್ಯವನ್ನು ವಿದ್ಯಾರ್ಥಿಗಳಿಗೆ ಒದಗಿಸತಕ್ಕದ್ದು.

(11) ಪ್ಯಾರಾ ಮೆಡಿಕಲ್ ಬೋರ್ಡ್ ಇಚ್ಛೆಸಿದಲ್ಲಿ, ಸದರಿ ಸಂಸ್ಥೆಯು ಹೊಂದಿರುವ ಮೂಲಭೂತ ಸೌಕರ್ಯಗಳ ಬಗ್ಗೆ ವಿದ್ಯಾರ್ಥಿಗಳು ಮೊದಲ ವರ್ಷದ ಪರೀಕ್ಷೆಯನ್ನು ತೆಗೆದುಕೊಳ್ಳುವ ಪೂರ್ವದಲ್ಲಿ ಸಂಸ್ಥೆಯನ್ನು ಎರಡನೇ ಬಾರಿಗೆ ತಪಾಸಣೆ ಮಾಡತಕ್ಕದ್ದು.

(12) ಸರ್ಕಾರದಿಂದ ಯಾವುದೇ ಆರ್ಥಿಕ ಸೌಲಭ್ಯ ಅಥವಾ ಅನುದಾನವನ್ನು ಈ ಸಂಸ್ಥೆಗೆ ನೀಡಲಾಗುವುದಿಲ್ಲ.

(13) ಸಂಸ್ಥೆಯನ್ನು ಪ್ಯಾರಾ ಮೆಡಿಕಲ್ ಬೋರ್ಡ್‌ನಲ್ಲಿ ನೋಂದಣಿ ಮಾಡಿಸತಕ್ಕದ್ದು ಹಾಗೂ ಪ್ಯಾರಾ ಮೆಡಿಕಲ್ ಬೋರ್ಡ್ ನಿಗದಿಪಡಿಸುವ ಮಾದರಿಯನ್ನು ಅನುಸರಿಸತಕ್ಕದ್ದು.

.3

Scanned by CamScanner

(14) ಪ್ಯಾರಾ ಮೆಡಿಕಲ್ ಕೋರ್ಸಿನ ಅಂತ್ಯದಲ್ಲಿ ಪ್ಯಾರಾ ಮೆಡಿಕಲ್ ಬೋರ್ಡ್ ನಡೆಸುವ ಪರೀಕ್ಷೆಯನ್ನು ವಿದ್ಯಾರ್ಥಿಗಳು ತೆಗೆದುಕೊಂಡು, ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರವನ್ನು ಪ್ಯಾರಾ ಮೆಡಿಕಲ್ ಬೋರ್ಡಿನಿಂದ ಪಡೆಯತಕ್ಕದ್ದು.

(15) ಪ್ರತಿ ತಪಾಸಣೆಗೆ ಮತ್ತು ಒಂದು ಕೋರ್ಸಿಗೆ ಸಂಸ್ಥೆಯು ರೂ.10,000/- (ಹತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಅಥವಾ ಈ ಬಗ್ಗೆ ಸರ್ಕಾರವು ಕಾಲಕಾಲಕ್ಕೆ ಪರಿಷ್ಕರಿಸಿ ನಿಗದಿಪಡಿಸಿದ ದರಗಳಂತೆ ತಪಾಸಣಾ ಶುಲ್ಕವಾಗಿ ಪ್ಯಾರಾ ಮೆಡಿಕಲ್ ಬೋರ್ಡಿಗೆ ಪಾವತಿ ಮಾಡತಕ್ಕದ್ದು.

(16) ಸರ್ಕಾರದ ಆದೇಶ ಸಂಖ್ಯೆ: ಆಕುಕ 144 ಎಂಎಂಇ 98, ದಿನಾಂಕ 30-03-1999 ರಲ್ಲಿ ನಿರ್ದಿಷ್ಟಪಡಿಸಿರುವ ಮಾರ್ಗಸೂಚಿಗಳನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ: ಆಕುಕ 328 ಎಂಇಎಸ್ಎಫ್ 07, ದಿನಾಂಕ 27-07-2007 ರಲ್ಲಿ ತಿಳಿಸಿರುವ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

(17) ಪ್ರಸ್ತುತ ವಿಧಿಸುತ್ತಿರುವ ಮೇಲ್ಕಂಡ ನಿಗದಿತ ಷರತ್ತುಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಅಂತಹ ಪ್ಯಾರಾ ಮೆಡಿಕಲ್ ಶಾಲೆ/ಕೋರ್ಸ್‌ನ ಮಾನ್ಯತೆಯನ್ನು ರದ್ದುಪಡಿಸಬಹುದೆಂದು ಪ್ಯಾರಾ ಮೆಡಿಕಲ್ ಸಂಸ್ಥೆಯು ರೂ.100/- ರ ಛಾಪಾ ಕಾಗದದಲ್ಲಿ ಮುಚ್ಚಳಿಕೆಯನ್ನು ಬೋರ್ಡ್‌ಗೆ ನೀಡತಕ್ಕದ್ದು.

(18) ಪ್ರಸ್ತಾವಿತ ಶಾಲೆಯು ಕಟ್ಟಡವು ಬಾಡಿಗೆ / ಲೀಸ್ ಆದ ಪಕ್ಷದಲ್ಲಿ ಬಾಡಿಗೆ / ಲೀಸ್ ಕರಾರು ಪತ್ರವು ರೂ.100/- ರ ಛಾಪಾ ಕಾಗದದಲ್ಲಿರಬೇಕು ಮತ್ತು ಬಾಡಿಗೆ / ಲೀಸ್ ಅವಧಿಯು ಕನಿಷ್ಠ 10 ವರ್ಷಗಳಿಗಿರತಕ್ಕದ್ದು.

(19) ಪ್ಯಾರಾ ಮೆಡಿಕಲ್ ಶಾಲೆ / ಕೋರ್ಸ್ ಮಂಜೂರಾತಿ ಆದ ದಿನಾಂಕದಿಂದ 05 ವರ್ಷದೊಳಗಾಗಿ ಮಂಜೂರಾತಿ ಪಡೆದ ಸಂಸ್ಥೆಯು ಪ್ಯಾರಾ ಮೆಡಿಕಲ್ ಶಾಲೆ / ಕೋರ್ಸ್‌ನ್ನು ನಡೆಸಲು ತನ್ನದೇ ಆದ ಸ್ವಂತ ಕಟ್ಟಡವನ್ನು ಹೊಂದುವುದಾಗಿ ರೂ.100/- ರ ಛಾಪಾ ಕಾಗದದಲ್ಲಿ ಮುಚ್ಚಳಿಕೆಯನ್ನು ಪ್ಯಾರಾ ಮೆಡಿಕಲ್ ಬೋರ್ಡ್‌ಗೆ ನೀಡತಕ್ಕದ್ದು.

(20) ಸಂಸ್ಥೆಯು ಪ್ರತಿ ವರ್ಷ ವಿದ್ಯಾರ್ಥಿಗಳ ಪ್ರವೇಶವನ್ನು ತೆಗೆದುಕೊಳ್ಳುವ ಮೊದಲು ಸಂಸ್ಥೆಯು ಪ್ರಾಂಶುಪಾಲರನ್ನು ಒಳಗೊಂಡಂತೆ ಎಲ್ಲಾ ಸಿಬ್ಬಂದಿಗಳ (ಬೋಧಕ ಮತ್ತು ಬೋಧಕೇತರ) ಸಂಪೂರ್ಣ ಮಾಹಿತಿಯನ್ನು ಬೋರ್ಡ್‌ಗೆ ನೀಡತಕ್ಕದ್ದು.

(21) ರಾಜ್ಯ ಸರ್ಕಾರ ಹಾಗೂ ಪ್ಯಾರಾ ಮೆಡಿಕಲ್ ಬೋರ್ಡ್ ಕಾಲಕಾಲಕ್ಕೆ ಹೊರಡಿಸಲಾಗುವ ಆದೇಶಗಳನ್ನು ಯಥಾವತ್ತಾಗಿ ಪಾಲಿಸತಕ್ಕದ್ದು.

(21) ಮೇಲ್ಕಂಡ ಯಾವುದೇ ಷರತ್ತುಗಳನ್ನು ಸಂಸ್ಥೆಯು ಉಲ್ಲಂಘಿಸಿದ್ದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Mahaboob...
(ಮೆಹಬೂಬ್ ಪಾಷ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ವೈದ್ಯಕೀಯ ಶಿಕ್ಷಣ)
22034293
15/12

ಇವರಿಗೆ:

1. ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಆನಂದರಾವ್ ವೃತ್ತ, ಬೆಂಗಳೂರು-560009.

..4

PRINCIPAL
Mahatma Gandhi Institute of Paramedical Science
P.J. Extension, DAVANGERE-577002.

Scanned by CamScanner

2. ಸದಸ್ಯ ಕಾರ್ಯದರ್ಶಿ, ಪ್ಯಾರಾ ಮೆಡಿಕಲ್ ಬೋರ್ಡ್, ಲಕ್ಷ್ಮಿ ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಂ.5, ಹೊಸ ನಂ.40/20ಎ, ವಾಣಿ ವಿಲಾಸ ಆಸ್ಪತ್ರೆ ಎದುರು, ಫೋರ್ಟ್, ಬೆಂಗಳೂರು –560002.
3. ಅಧ್ಯಕ್ಷರು / ಕಾರ್ಯದರ್ಶಿ / ಪ್ರಾಂಶುಪಾಲರು, ಶ್ರೀ ಭೈರವೇಶ್ವರ ಪ್ಯಾರಾ ಮೆಡಿಕಲ್ ಕಾಲೇಜ್, ಶ್ರೀ ಭೈರವೇಶ್ವರ ಡಿ.ಎಡ್. ಕಾಲೇಜ್ ಕಾಂಪ್ಲೆಕ್ಸ್, ಭೈರಪಲ್ಲಿ, ಶ್ರೀನಿವಾಸಪುರ, ಕೋಲಾರ ಜಿಲ್ಲೆ.
4. ಸಚಿವ ಸಂಪುಟ ಶಾಖೆ, ವಿಧಾನಸೌಧ, ಬೆಂಗಳೂರು – (ಪ್ರಕರಣ ಸಂಖ್ಯೆ:ಸಿ.740/2012)
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

<u>ಪ್ರತಿ ಮಾಹಿತಿಗಾಗಿ:</u>

1. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ), ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ), ವಿಕಾಸ ಸೌಧ, ಬೆಂಗಳೂರು.

Scanned by CamScanner